# ಪ್ರಾರ್ಥನೆ

# ಶ್ರೀಗಣೇಶ ಪ್ರಾತಃಸ್ಮರಣಸ್ತೋತ್ರಮ್

**ಪ್ರಾತಃಸ್ಮರಾಮಿ ಗಣನಾಥಮನಾಥಬಂಧುಂ**
**ಸಿಂದೂರಪೂರಪರಿಶೋಭಿತಗಂಡಯುಗ್ಮಮ್ ।**
**ಉದ್ದಂಡವಿಘ್ನಪರಿಖಂಡನಚಂಡದಂಡಮ್**
**ಆಖಂಡಲಾದಿಸುರನಾಯಕವೃಂದವಂದ್ಯಮ್ ॥ ೧ ॥**

ಸಿಂದೂರ ಬಣ್ಣದಿಂದ ಶೋಭಿಸುತ್ತಿರುವ ಎರಡು ಕಪೋಲಗಳುಳ್ಳ, ಅನಾಥರ ಬಂಧುವಾದ ಗಣನಾಥನನ್ನು ಪ್ರಾತಃಕಾಲದಲ್ಲಿ ಸ್ಮರಿಸುತ್ತೇನೆ. ಅವನು ಮೇರೆ ಮೀರಿದ ವಿಘ್ನಗಳನ್ನು ತನ್ನ ಪ್ರಚಂಡ ದಂಡದಿಂದ ಪರಿಹರಿಸಿಬಿಡುವನು. ಇಂದ್ರನೇ ಮೊದಲಾದ ಸಕಲ ದೇವತೆಗಳೂ ಅವನನ್ನು ನಮಸ್ಕರಿಸುವರು.

**ಪ್ರಾತರ್ನಮಾಮಿ ಚತುರಾನನವಂದ್ಯಮಾನಮ್**
**ಇಚ್ಛಾನುಕೂಲಮಖಿಲಂ ಚ ವರಂ ದದಾನಮ್ ।**
**ತಂ ತುಂದಿಲಂ ದ್ವಿರಸನಾಧಿಪಯಜ್ಞಸೂತ್ರಂ**
**ಪುತ್ರಂ ವಿಲಾಸಚತುರಂ ಶಿವಯೋಃ ಶಿವಾಯ ॥ ೨ ॥**

ಪ್ರಾತಃಕಾಲದಲ್ಲಿ ಬ್ರಹ್ಮನೂ ನಮಸ್ಕರಿಸುವಂತಹ, ವಿಲಾಸ ಚತುರನಾದ, ಶಿವ ಶಿವೆಯರ ಪುತ್ರನಾದ ಗಣನಾಥನನ್ನು ಮಂಗಳವನ್ನು ಹೊಂದುವುದಕ್ಕಾಗಿ ನಮಸ್ಕರಿಸುತ್ತೇನೆ. ಬೃಹದ್ ಗಾತ್ರದ ಹೊಟ್ಟೆಯುಳ್ಳ, ಸರ್ಪವನ್ನು ಯಜ್ಞೋಪವೀತವಾಗಿ ಧರಿಸಿರುವ ಅವನು ಬೇಡಿದವರ ಇಚ್ಛೆಗೆ ಅನುಗುಣವಾದ ವರಗಳನ್ನು ಕರುಣಿಸುವನು.

**ಪ್ರಾತರ್ಭಜಾಮ್ಯಭಯದಂ ಖಲು ಭಕ್ತಶೋಕ-**
**ದಾವಾನಲಂ ಗಣವಿಭುಂ ವರಕುಂಜರಾಸ್ಯಮ್ ।**



**ಅಜ್ಞಾನಕಾನನವಿನಾಶನಹವ್ಯವಾಹಮ್**
**ಉತ್ಸಾಹವರ್ಧನಮಹಂ ಸುತಮೀಶ್ವರಸ್ಯ ॥ ೩ ॥**

ಭಕ್ತರ ಶೋಕವೆಂಬ ಕಾಡಿಗೆ ಕಾಡ್ಗಿಚ್ಚಿನಂತಿರುವ, ಉತ್ಸಾಹವನ್ನು ವರ್ಧಿಸುವ, ಅಭಯದಾಯಕನಾದ, ಗಣಗಳಿಗೆ ನಾಯಕನಾದ, ಈಶ್ವರನ ಪುತ್ರನಾದ ವಿನಾಯಕನನ್ನು ಪ್ರಾತಃಕಾಲದಲ್ಲಿ ಭಜಿಸುತ್ತೇನೆ. ಆನೆಯ ಮುಖವನ್ನು ಹೊಂದಿರುವ ಅವನು ಅಜ್ಞಾನವೆಂಬ ಕಾಡನ್ನು ನಾಶಮಾಡುವ ಅಗ್ನಿಯಂತಿರುವನು.

## ಸೂಕ್ತಿಪ್ರಭ

**ಪ್ರ**ಜ್ಞೆಯು ದಿನನಿತ್ಯದ ಜೀವನದಲ್ಲಿ ಎಲ್ಲೆಡೆ ವ್ಯಕ್ತವಾಗಿದೆ. ಏಕೆಂದರೆ ಅದು ಎಲ್ಲೆಲ್ಲೂ ಪರಿಪೂರ್ಣವಾಗಿದೆ. ಪ್ರಜ್ಞೆಯು ಎಲ್ಲದರ ಮೂಲಕಾರಣ. ಏಕೆಂದರೆ ಅದು ಪ್ರತಿಯೊಂದು ವ್ಯಕ್ತವಾದ ವಸ್ತುಗಳಾಗಿ ಮಾರ್ಪಟ್ಟಿದೆ. — ಅಭಿನವಗುಪ್ತ

**ಸು**ಖವಾದಡೆ ಎನ್ನಿಂದಾಯಿತೆಂಬರು
ದುಃಖವಾದರೆ ದೈವ ಮಾಡಿತೆಂಬರು
ಸುಖಕೆ ತಾನಾರೊ ದುಃಖಕೆ ತಾನಾರೊ
ವಿಕಲನಾಗಿ ಕೆಡಬೇಡ ಮನುಜ
ರುಕುಮಣಿಯರಸ ಪುರಂದರ ವಿಠಲ
ಸುಖದುಃಖವ ಮಾಡಿಸುವ ಕಾಣೋ

— ಪುರಂದರದಾಸರು

**ಕಿಂ ಕುಲೇನೋಪದಿಷ್ಟೇನ ಶೀಲಮೇವಾತ್ರ ಕಾರಣಂ ।**
**ಭವಂತಿ ಸುತರಾಂ ಸ್ಫೀತಾಃ ಸುಕ್ಷೇತ್ರೇ ಕಂಟಕಿದ್ರುಮಾಃ ॥**

**ಕು**ಲವನ್ನು ಹೇಳಿ ಪ್ರಯೋಜನವಿಲ್ಲ. ನಡತೆಯೇ ಮುಖ್ಯ. ಒಳ್ಳೆಯ ಫಲವತ್ತಾದ ನೆಲದಲ್ಲಿ ಮುಳ್ಳಿನ ಗಿಡಗಳು ಚೆನ್ನಾಗಿ ಬೆಳೆಯುವುದಿಲ್ಲವೆ?

— ಶೂದ್ರಕ *(ಮೃಚ್ಛಕಟಿಕ ನಾಟಕ)*

**ಹೊ**ಸ ಅಭಿಪ್ರಾಯಗಳನ್ನು ಯಾವಾಗಲೂ ಸಂಶಯದಿಂದ ನೋಡುತ್ತಾರೆ; ಸಾಧಾರಣವಾಗಿ ವಿರೋಧಿಸುತ್ತಾರೆ; ಆದರೆ ಅಲ್ಲಿ ಯಾವುದೇ ತರ್ಕವಿರುವುದಿಲ್ಲ. ಕಾರಣ, ಅವು ಇನ್ನೂ ಸಾಮಾನ್ಯರಿಗೆ ಪರಿಚಯವಾಗಿರುವುದಿಲ್ಲ.

—ಜಾನ್ ಲಾಕ್